# ನೆನೆದಷ್ಟೂ ಮಧುರ..!

■ ಚಿತ್ರ– ಬರಹ: **ಶ್ಯಾಮಲಾ ಮಾಧವ**

ನಮ್ಮೂರು, ಮಂಗಳೂರ ಸೆರಗ ಹಾಸಿದಂತಿರುವ ನೇತ್ರಾವತಿ ನದಿಯಾಚೆಗಿನ ಉಳ್ಳಾಲದತ್ತಣ ಕಡಲಕರೆಯ ಹಳ್ಳಿ ಸೋಮೇಶ್ವರ ಉಚ್ಚಿಲ. ಊರ ತೆಂಕು ತುದಿಯಲ್ಲಿ ನಮ್ಮಜ್ಜಿ ಮನೆ, ಗುಡ್ಡೆಮನೆ. ಮನೆಯ ಮೂರು ದಿಕ್ಕುಗಳಲ್ಲೂ ವಿಶಾಲವಾಗಿ ಹರಡಿದ ಭತ್ತದ ಗದ್ದೆಗಳು. ಬಡಗು ದಿಕ್ಕಿಗೆ ನಮ್ಮ ನೆರೆಯ ಐಸಕುಂಞಿಯ (ಆಯಿಶಾ) ವಿಶಾಲ ಹಿತ್ತಿಲು. ಮೂಡಲಿಗೆ ಮುಖ ಮಾಡಿದ ನಮ್ಮ ಮನೆಯೆದುರು ಕಂಬಳ ಗದ್ದೆ. ಅದರೆದುರಿನಲ್ಲಿ ಹಾದುಹೋಗಿರುವ ಬಂಡಿ ರಸ್ತೆ. ತೆಂಕಲಾಗಿನ ಗದ್ದೆಯಂಚಿನಲ್ಲಿ ಹರಿವ ಹೊಳೆ. ಪಶ್ಚಿಮಕ್ಕೆ ಮನೆಯ ಹಿಂಭಾಗದಲ್ಲಿ ಹಿತ್ತಿಲಿಗೆ ಹೊಂದಿಕೊಂಡೇ ನಮ್ಮ ಗದ್ದೆ. ಅದರ ಆಚೀಚೆ ಸುವಿಶಾಲವಾಗಿ ಹರಡಿದ ಹಲವು ಗದ್ದೆಗಳು. ಅವುಗಳಂಚಿಗೆ ಕೇದಿಗೆ ಹಕ್ಕಲು. ಮತ್ತದರಾಚೆ ಎತ್ತರದ ದಿನ್ನೆಯ ಮೇಲೆ ಹಾದು ಹೋಗಿರುವ ರೈಲು ಹಳಿ. ಹಳಿಯಾಚೆಗೆ ಊರ ತೆಂಕುತುದಿಯಲ್ಲಿ ಬೆಟ್ಟದ ಮೇಲೆ ಕೋಟೆ ವಿಷ್ಣುಮೂರ್ತಿ ದೇವಳ.

ಗುಡ್ಡೆಮನೆ ಹಿತ್ತಿಲಲ್ಲಿ ಬದುಗಳ ಮೇಲೆ ತೆಂಗಿನ ಮರಗಳು; ಬದುಗಳ ನಡುವಣ ಕಿರುತೋಡುಗಳಲಿ ನನ್ನ ಪ್ರೀತಿಯ ಬೆಳ್ದಾವರೆ ಹೂ ಬಳ್ಳಿಗಳು. ಗದ್ದೆಗಳ ನಡುವಣ ಕೈತೋಡಿನಲ್ಲಿ ನಮ್ಮ ತೊಡೆ ಮಟ್ಟದ ನೀರು. ಅಂಗಿ ಮೇಲೆತ್ತಿಕೊಂಡು ಆ ತಂಪು ತಂಪು ನೀರನ್ನು ದಾಟುವುದೆಂದರೆ ಮೈಯೆಲ್ಲ ಪುಳಕ. ಹಿತ್ತಿಲ ತೆಂಕು ತುದಿಯಲ್ಲೊಂದು ಪಾಳ್ಗೊಳ. ಅದರಲ್ಲಿ ಕೆಂಪು ತಾವರೆ ಹೂಗಳು. ನಮ್ಮ ಗದ್ದೆಯಾಚೆಗಿನ ಹೊಳೆ ಪಕ್ಕದಲ್ಲೂ ಕೆಂದಾವರೆಗಳು ತುಂಬಿದ ಆಳವಾದ ಕೊಳವೊಂದಿದ್ದು, ಕೇದಿಗೆ ಬಲ್ಲೆ, ಹೊನ್ನೆಮರಗಳಿಂದ ಆವೃತವಾದ ಈ ಕೊಳಕ್ಕೆ ಯಾರೂ ಇಳಿಯುತ್ತಿರಲಿಲ್ಲ.

ವಿಶು ಹಬ್ಬದ ಕಣಿಗೊದಗುವ ನಮ್ಮದೇ ಗೇರು ಮರದ ಯಥೇಷ್ಟ ಹುರಿದ ಗೇರುಬೀಜ, ಮನೆಯಂಗಳದಲ್ಲೇ ಎಡತುದಿಗೆ ಆಳವಿಲ್ಲದ ಪುಟ್ಟ ಬಾವಿ. ಅದಕ್ಕೆ ತಾಗಿ ಕೊಂಡೇ ಬಲದಲ್ಲಿ, ಪೊಟರೆಗಳುಳ್ಳ ವಿಶಾಲ ಅತ್ತಿಮರ; ಎಡಕ್ಕೆ ಸದಾ ಕಂಪಿನ ಹೂ ಸುರಿಸುವ ಗೋಸಂಪಿಗೆ ಮರಗಳು. ಬಚ್ಚಲು ಮನೆಯ ಹಿಂದೆ ಹಿತ್ತಿಲಂಚಿಗೆ ಸಾಗುವಲ್ಲಿ ದೈತ್ಯಾಕಾರದ ತಾಳೆಮರ. ಯಾರೂ ಹತ್ತಲಾಗದಷ್ಟು ಅಗಲವಿದ್ದ ಈ ತಾಳೆಮರ ಅದೆಷ್ಟು ವರ್ಷಗಳಿಂದ ಅಲ್ಲಿ ನಿಂತಿತ್ತೋ, ಯಾರು ಬಲ್ಲರು? ಮರದ ತುಂಬಾ ತೂಗುವ ಬಯಾ ಪಕ್ಷಿಯ ಗೂಡುಗಳು. ಮನೆಯೆದುರಿಗೆ ಬಲಕ್ಕೆ ಹಿತ್ತಿಲ ಗೋಡೆಯ ಪಕ್ಕ ಬಲು ದೊಡ್ಡ ಗೇರು ಮರ. ದೊಡ್ಡ ಹಳದಿ ಬಣ್ಣದ ಬಲು ಸಿಹಿಯಾದ ಹಣ್ಣುಗಳು. ವಿಶು ಹಬ್ಬಕ್ಕೆ ಇದೇ ಮರದ ಯಥೇಷ್ಟ ಗೇರು ಬೀಜ.

ಭೋರೆಂದು ಮಳೆ ಸುರಿದು ನೆರೆ ನೀರೂ ಹರಿದು ಬರುವ ಮಳೆಗಾಲದಲ್ಲಿ ನಮ್ಮ ಬಾವಿ ತುಂಬ ನೀರು. ಆದರೆ ಪಕ್ಕದಲ್ಲೇ ಹರಿವ ಹೊಳೆಯ ವರಪ್ರಸಾದವಾಗಿ ಈ ನೀರು ಎಂದೂ ಉಪ್ಪುಪ್ಪು. ಕುಡಿವ ನೀರಿಗೆ ಪಕ್ಕದ ಹಿತ್ತಿಲ ಐಸ ಕುಂಞಿಯ (ಆಯಿಶಾ) ಮನೆಯ ಬಂಡೆಗಲ್ಲಿ ನೊರತೆಯ ಸಿಹಿ ಸಿಹಿ ನೀರೇ ಗತಿ. ದೊಡ್ಡರಜೆಯ ಸೆಖೆಗಾಲದಲ್ಲಿ , ಪುಟ್ಟಮಕ್ಕಳಾಗಿದ್ದ ನಮ್ಮನ್ನು, ಆ ಬಾವಿಯೆದುರಿನ ಕಲ್ಲುಚಪ್ಪಡಿಯ ಮೇಲೆ ಕುಳ್ಳಿರಿಸಿ, ಅಮ್ಮ, ಅತ್ತೆ, ದೊಡ್ಡಮ್ಮಂದಿರು, ಬಾವಿಯ ತಂಪು ತಂಪು ನೀರನ್ನು ಸೇದಿ ಸೇದಿ ತಲೆಗೆ ಹೊಯ್ದು ಮೀಯಿಸುತ್ತಿದ್ದರು.

ಐಸ ಕುಂಞಿ, ಬೆಳ್ಳನೆ ನಗುಮೊಗದ, ಜಿಂಕೆಯಂಥ ಸೌಮ್ಯಕಂಗಳ ಮೃದುಮಾತಿನ ಪ್ರಿಯ ಜೀವ. ನಮ್ಮ ಹುಡುಗು ಪಾಳ್ಯದ ಆಟೋಟಗಳು



ಅವರ ವಿಶಾಲ ಹಿತ್ತಿಲಲ್ಲೂ ನಡೆಯುವುದಿತ್ತು. ಮತ್ತೆ ಹಾಗೇ ಐಸ ಕುಂಞಿಯ ಮನೆಯ ಹೆಂಗಸರ ಬಾಗಿಲ ಜಗಲಿಯೇರಿ, ಅಲ್ಲಿ ಬೀಡಿ ಸುತ್ತುತ್ತಾ ಕುಳಿತಿರುತ್ತಿದ್ದ ಅವಳ ಪಕ್ಕ ಕುಳಿತು, ನಾನೂ ಮಾಡುವೆನೆಂದು ಅದೆಷ್ಟು ಎಲೆಗಳನ್ನು ಹಾಳು ಮಾಡಿದ್ದೆನೋ, ದೇವರೇ ಬಲ್ಲ. ಆದರೆ ಆ ಸೌಮ್ಯಕಂಗಳ ಸಿಹಿ ನಗುವಷ್ಟೇ ಸಿಗುತ್ತಿದ್ದ ಬಳುವಳಿ. ಒಂದು ಕಟುಮಾತನ್ನೂ ಆಡಲರಿಯದ